**ದಿನಾಂಕ 11.02.2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಸ್.ಸಿ.ಎಸ್. ಅರ್ಜಿದಾರರ ಪರ ವಕೀಲರಿಂದಃ**

ನಾನು 2ನೇ ಎದುರುದಾರರ ಕಂಪನಿಯಲ್ಲಿ ಕಳೆದ 5 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಎಲ್ ಎಲ್ ಬಿ ಪಧವೀಧರ. 2ನೇ ಎದುರುದಾರರ ಕಂಪನಿಯ ಪರವಾಗಿ ಸಲ್ಲಿಸಿರುವ ತಕರಾರಿನ ವಿಷಯಗಳನ್ನು ನಾನು ತಿಳಿದುಕೊಂಡಿದ್ದೇನೆ.

ಮೋಟಾರ್ ಸೈಕಲ್ ಸಂಖ್ಯೆ ಕೆಎ-55/ಜೆ-5824 ಅಪಘಾತದಲ್ಲಿ ಒಳಪಟ್ಟಿಲ್ಲ ಎಂದು ನನ್ನ ತಕರಾರಿನಲ್ಲಿ ಹೇಳಿದ್ದೇನೆ. ನಿ.ಆರ್. 1 ರಲ್ಲಿ ಸದರಿ ಮೋಟಾರ್ ಸೈಕಲ್ ನಮೂದಾಗಿದೆ ಎಂದರೆ ಸರಿ, ಆದರೆ ಮೋಟಾರ್ ಸೈಕಲ್ ಸಂಖ್ಯೆ ಕೆಎ-09/6674 ರಲ್ಲಿ ಅರ್ಜಿದಾರರೇ ಚಾಲನೆ ಮಾಡಿ ಸ್ವತ: ಬಿದ್ದಿದ್ದಾರೆಂದು ಅದರಲ್ಲಿ ನಮೂದು ಇದೆ. ನಿ.ಆರ್.1 ರಲ್ಲಿ ಆ ವಿಷಯ ನಮೂದಾಗಿಲ್ಲ ಎಂದರೆ ಸರಿಯಲ್ಲ.

ಮೋಟಾರ್ ಸೈಕಲ್ ಸಂಖ್ಯೆ ಕೆಎ-55/ಜೆ-5824 ಕ್ಕೆ ನಮ್ಮ ಕಂಪನಿಯಿಂದ ವಿಮಾ ಪಾಲಿಸಿ ಅಪಘಾತದ ವೇಳೆಗೆ ಇತ್ತು ಎಂದರೆ ಸರಿ. 1ನೇ ಎದುರುದಾರರಿಗೆ ಅಪಘಾತದ ವೇಳೆಗೆ ಸೂಕ್ತ ಚಾಲನಾ ಪರವಾನಗಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ವಿಷಯವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣದಲ್ಲಿ ಹೇಳಿದ್ದೇನೆ ಎಂದರೆ ಸದರಿ ಮೋಟಾರ್ ಸೈಕಲ್‌ನ್ನು ಈ ಪ್ರಕರಣದಲ್ಲಿ ಸೇರಿಸಿರುವುದರಿಂದ ಅವರಿಗೆ ಸೂಕ್ತ ಚಾಲನಾ ಪರವಾನಗಿ ಇತ್ತು ಎಂದು ನಾನು ಹೇಳಿದ್ದೇನೆ.

ಅಪರಾಧ ಸಂಖ್ಯೆ 341/2016 ರಲ್ಲಿ ತಿ. ನರಸೀಪುರ ಪೊಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ, ಅದೇ ಅಪರಾಧ ಸಂಖ್ಯೆಯಲ್ಲಿ ಎರಡೂ ದೋಷಾರೋಪಣಾ ಪಟ್ಟಿ ಸಲ್ಲಿಸಲಾಗಿದೆ. ಆ ಎರಡೂ ದೋಷಾರೋಪಣಾ ಪಟ್ಟಿಗಳನ್ನು ಸಲ್ಲಸಿದ್ದೀರಾ ಎಂದರೆ ಆರ್.ಡಬ್ಲ್ಯೂ-2 ರವರು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇವೆ. ಆ ಎರಡೂ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲು ನಮಗೆ ತೊಂದರೆ ಇತ್ತಾ ಎಂದರೆ, ನಮಗೆ ಲಭ್ಯವಾದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಇನ್ನೊಂದನ್ನು ಅರ್ಜಿದಾರರೇ ಸಲ್ಲಿಸಿರುತ್ತಾರೆ.

ನಿ.ಆರ್.4 ರ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ನಾವು ಯಾವ ದಿನಾಂಕದಂದು ಪಡೆದಿರುತ್ತೇವೆಂದು ನೆನಪಿಲ್ಲ. ಆ ಪ್ರತಿಯನ್ನು ಪಡೆಯಲು ನಮ್ಮ ಕಂಪನಿಯಿಂದ ಯಾವ ಪೊಲೀಸರ ಮುಂದೆ ಅರ್ಜಿಯನ್ನು ಸಲ್ಲಿಸಲಾಯಿತು ಎಂದು ನನಗೆ ಮಾಹಿತಿ ಇಲ್ಲ, ನಮ್ಮ ಕಂಪನಿಯ ಕಡೆಯಿಂದ ದಾಖಲೆಗಳನ್ನು ಸಂಗ್ರಹಿಸಲು ಕಂಪನಿಯ ವ್ಯಕ್ತಿಗಳನ್ನು ನೇಮಕ ಮಾಡಲಾಗಿದ್ದು, ಅವರ ಮೂಲಕ ದಾಖಲೆಗಳನ್ನು ಸಂಗ್ರಹಿಸಲಾಗುತ್ತದೆ.

ಅಪಘಾತದಲ್ಲಿ ಮೋಟಾರ್ ಸೈಕಲ್ ಸಂಖ್ಯೆ ಕೆಎ-55/ಜೆ-5824 ಭಾಗಿಯಾಗಿದ್ದು, ಅರ್ಜಿದಾರರಿಗೆ ಪರಿಹಾರವನ್ನು ನೀಡಬೇಕಾಗುತ್ತದೆ ಎಂದು ತಿಳಿದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.9 ರ ಪ್ರಕಾರ ಸಿಸಿ ಸಂಖ್ಯೆ 390/2017 ರಲ್ಲಿ ಈ ಪ್ರಕರಣದ 1ನೇ ಎದುರುದಾರ ತಪ್ಪನ್ನು ಒಪ್ಪಿಕೊಂಡು ದಂಡ ಪಾವತಿಸಿರುತ್ತಾರೆ ಎಂದರೆ ಅವರು

ಅರ್ಜಿದಾರರ ಜೊತೆ ಶಾಮೀಲಾಗಿ ದಂಡ ಪಾವತಿಸಿರುತ್ತಾರೆ. ಅವರು ಆ ರೀತಿ ಶಾಮೀಲಾಗಿದ್ದಾರೆ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದರೆ ನಿ.ಆರ್. 1 ರ ದಾಖಲೆ ಆಧಾರದ ಮೇಲೆ ಹೇಳುತ್ತಿದ್ದೇನೆ. ಆ ದಾಖಲೆಯ ಬಗ್ಗೆ ಸಾಕ್ಷ್ಯ ನೀಡಲು ನಾನು ವೈದ್ಯರಂತೆ ಪರಿಣಿತನಲ್ಲ ಎಂದರೆ ಆ ದಾಖಲೆಯನ್ನು ನೋಡಿದರೆ ಗೊತ್ತಾಗುತ್ತದೆ ಮತ್ತು ಆ ದಾಖಲೆಯನ್ನು ನೀಡಿದ ವೈದ್ಯರನ್ನು ನಮ್ಮ ಕಂಪನಿ ಪರವಾಗಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿದ್ದೇವೆ.

ನಿಪಿ.9 ರಲ್ಲಿ ಆಗಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ, ಆ ಪ್ರಕರಣಕ್ಕೆ ನಮ್ಮ ಕಂಪನಿ 3ನೇ ಪಕ್ಷಗಾರರಾಗಿರುವ ಕಾರಣ ನಾವು ಮೇಲ್ಮನವಿ ಸಲ್ಲಿಸಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಮೋಟಾರ್ ಸೈಕಲ್ ಸಂಖ್ಯೆ ಕೆಎ-55/ಜೆ-5824 ಅಪಘಾತದಲ್ಲಿ ಭಾಗಿಯಾಗಿದ್ದರೂ ಕೂಡ ಮತ್ತು 1ನೇ ಎದುರುದಾರರಿಗೆ ಸೂಕ್ತ ಚಾಲನಾ ಪರವಾನಗಿ ಇದ್ದರೂ ಕೂಡ ಅರ್ಜಿದಾರರಿಗೆ ಪರಿಹಾರ ಕೊಡುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.**